(ಕರ್ನಾಟಕ ಸರ್ಕಾರ)

# ತಹಸೀಲ್ದಾರರ ನ್ಯಾಯಾಲಯ ಹಗರಿಬೊಮ್ಮನಹಳ್ಳಿ

ದೂರವಾಣಿ ಸಂಖ್ಯೆ:-08397-238 255 E Mail: tahhbhele@gmail.com Pin Code-583 212

ನಂ/ಕಂ/ಪಹಣಿ/ವಿವಾದ/18/2015.16; ದಿನಾಂಕ: 30.06.2016

| ವಾದಿ | ಪ್ರತಿವಾದಿ |
|---|---|
| ಗಂಗಮ್ಮ ತಂದೆ ಕರೇಹನುಮಂತಪ್ಪ<br>ಪಿಂಜಾರಹೆಗ್ಡಾಳ್ ಗ್ರಾಮ<br>ಹಗರಿಬೊಮ್ಮನಹಳ್ಳಿ(ತಾ) | 1.ಬಸಾಪುರ ಕರೆಹನುಮಪ್ಪ ತಂದೆ ದೊಡ್ಡಹನುಮಪ್ಪ<br>2.ಬಸಾಪುರದ ಅನ್ನಮ್ಮ ಗಂಡ ಶೇಕ್ರಪ್ಪ<br>ಪಿಂಜಾರಹೆಗ್ಡಾಳ್ ಗ್ರಾಮ, ಹ.ಬೊ.ಹಳ್ಳಿ(ತಾ) |

ಉಪಸ್ಥಿತರು:**ಕೆ.ಬಿ.ಆನಂದಪ್ಪನಾಯಕ್,** ಕ.ಆ.ಸೇ
**ತಹಶೀಲ್ದಾರರು**
**ಹಗರಿಬೊಮ್ಮನಹಳ್ಳಿ**

ಕಾರ್ಯನಿರ್ವಾಹಕ ದಂಡಾಧಿಕಾರಿ ... ಹ.ಬೊ.ಹಳ್ಳಿ

ವಿಷಯ:-ಹಗರಿಬೊಮ್ಮನಹಳ್ಳಿ ತಾಲೂಕು ಪಿಂಜಾರಹೆಗ್ಡಾಳ್ ಗ್ರಾಮದ ಸರ್ವೆ ನಂ. 60/ಸಿ ವಿ: 05.31 ಎಕರೆ ಜಮೀನನ್ನು ಡಾ.ನಂ. ಹೆಚ್.ಬಿ.ಹೆಚ್.1.02616. 2015.16; ದಿನಾಂಕ:19.10.2015ರ ನೊಂದಾಯಿತ ದಾನ ಪತ್ರದ ಪ್ರಕಾರ ಹಕ್ಕುಬದಲಾವಣೆ ಮಾಡಲು ದಾಖಲಾದ ತಕರಾರು ಅರ್ಜಿ ವಿಚಾರಣೆ ಕುರಿತು.

*******

ಪೀಠಿಕೆ;

ಹಗರಿಬೊಮ್ಮನಹಳ್ಳಿ ತಾಲೂಕು ಪಿಂಜಾರಹೆಗ್ಡಾಳ್ ಗ್ರಾಮದ ಸರ್ವೆ ನಂ.60/ಸಿ ವಿ: 05.31 ಎಕರೆ ಜಮೀನನ್ನು ಡಾ.ನಂ.ಹೆಚ್.ಬಿ.ಹೆಚ್.1.02616.2015.16; ದಿನಾಂಕ:19.10.2015ರ ನೊಂದಾಯಿತ ದಾನ ಪತ್ರದ ಪ್ರಕಾರ ಪಟ್ಟಾದಾರರಾದ 01ನೇ ಪ್ರತಿವಾದಿಯು ವಾದಿಗೆ ಬಿಟ್ಟುಕೊಟ್ಟಿರುತ್ತಾರೆ, ಸದರಿ ನೊಂದಾಯಿತ ದಾನಪತ್ರದ ಪ್ರಕಾರ ಹಕ್ಕುಬದಲಾವಣೆಗೆ ಕ್ರಮವಹಿಸಲಾಗಿ ನಿಗದಿತ ಅವಧಿಯೊಳಗೆ 02ನೇ ಪ್ರತಿವಾದಿಯು ತಕರಾರು ಅರ್ಜಿಯನ್ನು ಸಲ್ಲಿಸಿರುವುದರಿಂದ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಹಕ್ಕು ಬದಲಾವಣೆ ಆದೇಶ ಸಂ/ಹೆಚ್-37/2015-16; ದಿ: .11.15ರ ಪ್ರಕಾರ ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರು ಸಲ್ಲಿಸಿರುತ್ತಾರೆ.

ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರ ಹಕ್ಕುಬದಲಾವಣೆ ಆದೇಶದನ್ವಯ ದಿನಾಂಕ:-07.01.16 ರಿಂದ ದಿ:-30.06.2016ರ ವರೆಗೆ ಕಾಲಾವಕಾಶ ನೀಡಿ ವಿಚಾರಣೆ ಮಾಡಲಾಯಿತು, ವಿಚಾರಣೆ ಸಮಯದಲ್ಲಿ 02ನೇ ಪ್ರತಿವಾದಿ ಪರವಾಗಿ ಶ್ರೀ ಡಿ ಮಾಯಣ್ಣ, ವಕೀಲರು ವಕಾಲತ್ ಅರ್ಜಿ ಸಲ್ಲಿಸಿರುತ್ತಾರೆ. ವಿಚಾರಣೆಗೆ ಹಾಜರಾದ ವಾದಿಯು ತನ್ನ ಮೌಖಿಕ ಹೇಳಿಕೆ ನೀಡುತ್ತಾ, ವಿವಾದಿತ ಜಮೀನು ಹಾಲಿ ಪಹಣಿ ದಾಖಲೆ ಪ್ರಕಾರ ತನ್ನ ತಂದೆಯ ಹೆಸರಿನಲ್ಲಿ ಹಕ್ಕು ದಾಖಲೆ ಇದ್ದು, ಅವರು ವಾರಸು

ಮಗಳಾದ ತನಗೆ ನೊಂದಾಯಿತ ದಾನಪತ್ರದ ಪ್ರಕಾರ ಬಿಟ್ಟು ಕೊಟ್ಟಿದ್ದು ಆ ಪ್ರಕಾರ ತನ್ನ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡುವಂತೆ ವಿನಂತಿಸಿರುತ್ತಾರೆ, ಈ ಬಗ್ಗೆ ಜಮೀನಿನ ಪಟ್ಟಾದಾರರು ಸಹಾ ತಮ್ಮ ಸಮ್ಮತಿಯನ್ನು ಸೂಚಿಸುತ್ತಾ ವಾದಿಯ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಒಪ್ಪಿರುತ್ತಾರೆ.

ಈ ಬಗ್ಗೆ ತಕರಾರು ಸಲ್ಲಿಸಿರುವ 02ನೇ ಪ್ರತಿವಾದಿಯನ್ನು ವಿಚಾರಣೆ ಮಾಡಲಾಗಿ, ವಿವಾದಿತ ಜಮೀನಿನ ಪಟ್ಟಾದಾರರು ತನ್ನ ಗಂಡನ ತಂದೆಯಾಗಿದ್ದು ನನಗೆ ಮಾವ ಆಗುತ್ತಾರೆ, ಆದ್ದರಿಂದ ಸದರಿ ಜಮಿನಿನಲ್ಲಿ ತನಗೂ ಹಕ್ಕು ಇದ್ದು ಭಾಗ ನೀಡಬೇಕಾಗಿರುವುದರಿಂದ ತಕರಾರು ಅರ್ಜಿ ಸಲ್ಲಿಸಿರುತ್ತೇನೆ ಎಂದು ತಿಳಿಸಿರುತ್ತಾರೆ, ಆದರೆ ಈ ಬಗ್ಗೆ ಪ್ರತಿಕ್ರಿಯಿಸಿದ ವಾದಿಯು ತಕರಾರುದಾರರಿಗೆ ಅವರಿಗೆ ಬರಬೇಕಾದ ಭಾಗದ ಜಮೀನನ್ನು ಪಾಲುವಿಭಾಗದ ಮೂಲಕ ನೀಡುವುದಾಗಿ ತಿಳಿಸಿರುತ್ತಾರೆ, ಈ ಬಗ್ಗೆ ತಕರಾರುದಾರರು ಸಮ್ಮತಿ ಸೂಚಿಸಿರುತ್ತಾರೆ. ಕಾರಣ ವಿವಾಧಿತ ಜಮೀನಿನ ಪಟ್ಟಾದಾರರು ಹಾಗೂ ವಾದಿ ಮತ್ತು ತಕರಾರುದಾರರ ವಿಚಾರಣೆಯಿಂದ ವಿವಾದಿತ ಜಮೀನನ್ನು ನೊಂದಾಯಿತ ದಾನ ಪತ್ರದ ಪ್ರಕಾರ ಹಕ್ಕುಬದಲಾವಣೆಗೆ ಆದೇಶಿಸುವುದು ಸಮಂಜಸವೆಂದು ಕಂಡುಬಂದಿರುವುದರಿಂದ ಈ ಕೆಳಗಿನಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಹಾಗೂ ವಾಸ್ತವಾಂಶಗಳ ಹಿನ್ನಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಪಿಂಜಾರಹೆಗ್ಡಾಳ್ ಗ್ರಾಮದ ಸರ್ವೆ ನಂ.60/ಸಿ ವಿ: 05.31 ಎಕರೆ ಜಮೀನನ್ನು ಡಾ.ನಂ.ಹೆಚ್.ಬಿ.ಹೆಚ್.1.02616.2015.16; ದಿನಾಂಕ:19.10.2015ರ ನೊಂದಾಯಿತ ದಾನ ಪತ್ರದ ಪ್ರಕಾರ ವಾದಿಯಾದ ಶ್ರೀಮತಿ ಗಂಗಮ್ಮ ತಂದೆ ಕರೇಹನುಮಂತಪ್ಪ ಇವರ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: 30.06.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

ಗೆ,
ವಾದಿ/ಪ್ರತಿವಾದಿಗೆ

(ಕೆ.ಬಿ.ಆನಂದಪ್ಪನಾಯಕ್)
ತಹಶೀಲ್ದಾರರು
ಹಗರಿಬೊಮ್ಮನಹಳ್ಳಿ

ಪ್ರತಿಯನ್ನು:
ಶಿರಸ್ತೇದಾರರು ಭೂಮಿ ಕೇಂದ್ರ ತಾಲೂಕು ಕಛೇರಿ ಹಗರಿಬೊಮ್ಮನಹಳ್ಳಿ ಇವರಿಗೆ ಅಗತ್ಯ ಕ್ರಮಕ್ಕಾಗಿ ನೀಡಿದೆ.
ಕಂದಾಯ ನಿರೀಕ್ಷಕರು ಹಗರಿಬೊಮ್ಮನಹಳ್ಳಿ ಇವರಿಗೆ ಮಾಹಿತಿಗಾಗಿ ನೀಡಿದೆ.

copy received.
Adv for Defen-2

29/7/16
DESPATCHED

29/7.